ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.: 293/2018

ಪಿ. ಡಬ್ಲ್ಯು: 03
ಸಿ. ಡಬ್ಲ್ಯು: 05

| | | |
|---|---|---|
| ಸಾಕ್ಷಿದಾರರ ಹೆಸರು | : | ಸಿ. ನಂಜುಂಡಯ್ಯ |
| ತಂದೆ/ಪತಿಯ ಹೆಸರು | : | ಲೇಟ್ ಚಿಕ್ಕಹುಚ್ಚಯ್ಯ |
| ವಯಸ್ಸು | : | 64 ವರ್ಷ |
| ವೃತ್ತಿ | : | ನಿವೃತ್ತ ಎ.ಎಸ್.ಐ |
| ವಾಸ | : | ಮೈಸೂರು |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 18.03.2024
ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ

ನಾನು ದಿ: 15.06.2015 ರಿಂದ 20.02.2018 ವರೆಗೆ ಎ.ಎಸ್.ಐ ಎಂದು ಅರಕೆರೆ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ: 21.11.2017 ರಂದು ನಾನು ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದಾಗ ಸಂಜೆ 06.30 ಸಮಯದಲ್ಲಿ ಗೌರಮ್ಮ ಎನ್ನುವ ಮಹಿಳೆ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಅದನ್ನು ಠಾಣಾ ಗುನ್ನಾ ಸಂ: 220/2017 ರಂತೆ ನೊಂದಾಯಿಸಿಕೊಂಡು ಪ್ರ.ವ.ವರದಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ನಮ್ಮ ಮೇಲಾಧಿಕಾರಿಯವರಿಗೆ ಸಲ್ಲಿಸಿಕೊಂಡಿರುತ್ತೇನೆ.

ದಿ: 22.11.2017 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಬೆಳಿಗ್ಗೆ 10.00-10.45 ವರೆಗೆ ನಾಗಮ್ಮ ಮತ್ತು ಪುಟ್ಟಮ್ಮ ಎನ್ನುವವರ ಸಮಕ್ಷಮ ಪಿರ್ಯಾದಿ ತೋರಿಸಿದ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿರುತ್ತೇನೆ. ಮಹಜರ್ ಕಾಲದಲ್ಲಿ ಪಿರ್ಯಾದಿ ಹಾಜರುಪಡಿಸಿದ 5 ಅಡಿ ಉದ್ದದ ಮಧ್ಯೆ ಕಟ್ ಆಗಿದ್ದ ನೀಲಿ ಬಣ್ಣದ ಪ್ಲಾಸ್ಟಿಕ್ ಪೈಪ್ ಅನ್ನು ನನ್ನ ವಶಕ್ಕೆ ಪಂಚರ ಸಮಕ್ಷಮ ಪಡೆದಿರುತ್ತೇನೆ. ವಶಪಡಿಸಿಕೊಂಡ ಹಲ್ಲೆಗೆ ಉಪಯೋಗಿಸಿದ್ದ ಪೈಪ್ ಅನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ.

ಅದೇ ದಿನ ಪಿರ್ಯಾದಿ ಮತ್ತು ಪುಟ್ಟಮ್ಮ ಎನ್ನುವವರ ಹೇಳಿಕೆ ಪಡೆದಿದ್ದೇನೆ. ನಂತರ ಕಡತವನ್ನು ಮುಂದಿನ ತನಿಖೆಗಾಗಿ ನಮ್ಮ ಠಾಣಾ ಪಿ.ಎಸ್.ಐ ರವರಿಗೆ ವಹಿಸಿಕೊಟ್ಟಿರುತ್ತೇನೆ.

ಸಾಕ್ಷಿಯು ಮಹಜರ್ ನೋಡಿ ಗುರುತಿಸಿದ್ದು ಮಹಜರ್ ಅನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.1-ಎ ಎಂದು ಗುರುತಿಸಲಾಯಿತು.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ.3 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.3-ಎ ಎಂದು ಗುರುತಿಸಲಾಯಿತು. ಮಹಜರ್ ಕಾಲದಲ್ಲಿ ನಾನು ವಶಪಡಿಸಿಕೊಂಡಿದ್ದ ಪೈಪ್ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಪೈಪ್ ನೋಡಿ ಗುರುತಿಸಿದ್ದು ಅದನ್ನು ಮು.ಮಾಲು.1 ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಸಿ.ಕೆ.ಎಸ್ ವಕೀಲರಿಂದ</u>**

ದೂರು ನೀಡಲು ಠಾಣೆಗೆ ಗೌರಮ್ಮ ಮಾತ್ರ ಬಂದಿದ್ದರು. ಗಲಾಟೆಯ ಸಂಬಂಧಿತವಾಗಿ ಹಲ್ಲೆಗೊಳಗಾದ ಗಾಯಾಳು ಚಿಕಿತ್ಸೆ ಪಡೆಯಲು ಬಂದಿದ್ದಾರೆ ಎಂಬ ಮಾಹಿತಿ ಆಸ್ಪತ್ರೆಯಿಂದ ನಮಗೆ ಬಂದಿರಲಿಲ್ಲ. ಪಿರ್ಯಾದಿಯಿಂದ ನಾನು ಆಕೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ ಬಗ್ಗೆ ದಾಖಲೆಯನ್ನು ಪಡೆದಿಲ್ಲ. ದೂರನ್ನು ಆರೋಪಿತರ ವಿರುದ್ದ ಪಿರ್ಯಾದಿ ಏಕೆ ನೀಡಿದ್ದಾರೆಂದು ನಾನು ವಿಚಾರಿಸಿದ್ದೇನೆ.

ನಾನು ನಿಪಿ.1 ಮಹಜರ್ ಅನ್ನು ಕೃತ್ಯ ನಡೆದ ಸ್ಥಳದಲ್ಲಿ ಮಾಡಿಲ್ಲ ಬದಲಾಗಿ ಪೋಲೀಸ್ ಠಾಣೆಯಲ್ಲಿಯೇ ಕುಳಿತು ತಯಾರಿಸಿದ್ದೇನೆ ಎಂದರೆ ಸುಳ್ಳು. ಪಿರ್ಯಾದಿ ಹಾಗೂ ಮಹಜರ್ ನಲ್ಲಿ ಪಂಚರಾಗಿ ತೋರಿಸಿರುವ ನಾಗಮ್ಮ ಸಂಬಂಧಿಗಳು ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ತೊಂದರೆ ನೀಡುವ ಸಲುವಾಗಿ ಪಿರ್ಯಾದಿಯ ಕೋರಿಕೆ ಮೇರೆಗೆ ಸುಳ್ಳು ಪ್ರ.ವ.ವರದಿ ತಯಾರಿಸಿ ಅದಕ್ಕೆ ಪೂರಕವಾಗಿ ನಿಪಿ.1 ಮಹಜರ್ ತಯಾರಿಸಿ ಸುಳ್ಳು ಕೇಸು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮು.ಮಾಲು.1 ರೀತಿಯ ಪೈಪ್ ಗಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ಮು.ಮಾಲು.1 ರ ಮೇಲೆ ಪಂಚರ ಸಹಿಗಳು ಇಲ್ಲವೆಂದರೆ ಸರಿ. ನಾನು ಪಿರ್ಯಾದಿ ಹಾಗೂ ಪುಟ್ಟಮ್ಮನವರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.